# ‘ದೂರಸಂಪರ್ಕ ಪದವಿಗಳಂತೆ ಸಂಗೀತವನ್ನು ಕಲಿಯಲಾಗದು



**◆ ಸಂಗೀತದ ಅಕಡೆಮಿಕ್ ಅಧ್ಯಯನದ ಅಗತ್ಯ ಇಂದು ಇದೆಯೇ? ಇದರಿಂದ ನುರಿತ ಗಾಯಕ/ಗಾಯಕಿಯರು ರೂಪುಗೊಳ್ಳಲು ಸಾಧ್ಯವೇ?**

ಕರ್ನಾಟಕ ಸೇರಿದಂತೆ ಭಾರತದಲ್ಲಿ ಅತ್ಯುತ್ತಮ ಗಾಯನ ಶೈಲಿ, ಘರಾಣಾಗಳು, ಗುರುಶಿಷ್ಯ ಪರಂಪರೆಗಳು, ಲಕ್ಷಾಂತರ ಧ್ವನಿಮುದ್ರಣಗಳು ಹೊರಬಿದ್ದಿವೆ. ಯೂಟ್ಯೂಬ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲೂ ಶಾಸ್ತ್ರೀಯ ಸಂಗೀತದ ಬಹುದೊಡ್ಡ ಕಣಜವೇ ನಮ್ಮ ಮುಂದಿದೆ. ಆದರೆ ಈ ಎಲ್ಲ ಆಕರ ಬಳಸಿ ಸಂಗೀತವನ್ನು ಶಿಸ್ತುಬದ್ಧ ಅಕಡೆಮಿಕ್ ಅಧ್ಯಯನ ಮಾಡುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ವಿವಿಗಳಲ್ಲಿ ಕೈಗೊಂಡ ಸಂಗೀತ ಕುರಿತ ಬಹುಪಾಲು ಪಿಎಚ್.ಡಿ., ಎಂ.ಫಿಲ್. ಅಧ್ಯಯನಗಳು ಗಾಯಕರನ್ನು ಪರಿಚಯಿಸುವಷ್ಟರ ಮಟ್ಟಿಗೆ ಮಾತ್ರ ಸೀಮಿತಗೊಂಡಿವೆ. ಸಂಗೀತ ದಿಗ್ಗಜರ ಗಾಯನಶೈಲಿ, ಲಯಕಾರಿ ಅಂಶಗಳು, ಹಾಡುಗಾರಿಕೆಯಲ್ಲಿನ ವೈಶಿಷ್ಟ್ಯ, ಶುದ್ಧರಾಗ, ಸಂಕೀರ್ಣ ರಾಗಗಳನ್ನು ಪ್ರಸ್ತುತಪಡಿಸುವಲ್ಲಿನ ಸೂಕ್ಷ್ಮಗ್ರಾಹಿ ಅಂಶಗಳನ್ನು ಅಧ್ಯಯನಕ್ಕೊಳಪಡಿಸುವುದು ಇಂದಿನ ಅಗತ್ಯ. ಗಾಯನದ ಮೂಲ ಸ್ವರೂಪವನ್ನು ಚೆನ್ನಾಗಿ ಅರಿತು ಅಧ್ಯಯನ ಮಾಡಿದರೆ ಹೆಚ್ಚು ಪರಿಣಾಮಕಾರಿ.

**◆ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಶಾಸ್ತ್ರೀಯ ಸಂಗೀತ ಕಲಿತ ಮಕ್ಕಳು ಮುಂದೆ ಸಂಗೀತವನ್ನೇ ವೃತ್ತಿಯನ್ನಾಗಿಸಿಕೊಳ್ಳಲು ಸಾಧ್ಯವಿದೆಯೇ?**

ಸಂಗೀತ ದಿಗ್ಗಜರಾದ ಪಂ. ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ಕುಮಾರ ಗಂಧರ್ವ ಮುಂತಾದವರು ಗುರುಕುಲ ಪದ್ದತಿಯಲ್ಲಿಯೇ ತಾಲೀಮು ಪಡೆದು ಸಂಗೀತವನ್ನು ವೃತ್ತಿಯನ್ನಾಗಿಸಿಕೊಂಡರು. ಪ್ರಭಾ ಅತ್ರೆ, ಸಂಗಮೇಶ ಗುರವ, ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ಪಂ.ವೆಂಕಟೇಶ್ ಕುಮಾರ್ ಗುರುಕುಲ ಪದ್ಧತಿಯಲ್ಲಿ ಸಂಗೀತ ಕಲಿತು ಮುಂದೆ ಸಂಗೀತ ಶಿಕ್ಷಣವನ್ನು ಕಾಲೇಜಿನಲ್ಲಿ ನೀಡಿದವರು. ಮಲ್ಲಿಕಾರ್ಜುನ ಮನ್ಸೂರ್ ಅವರು ಧಾರವಾಡದ ಕರ್ನಾಟಕ ವಿವಿಯಲ್ಲಿ ಸಂಗೀತ ಅಧ್ಯಯನಕ್ಕಾಗಿಯೇ ಸಂಗೀತ ವಿಭಾಗ ತೆರೆದರು. ಪಂಚಾಕ್ಷರಿ ಗವಾಯಿಗಳು ಸಂಗೀತ ಸಂಸ್ಥೆ ಸ್ಥಾಪಿಸಿ ಸಾವಿರಾರು ಮಕ್ಕಳಿಗೆ ಸಂಗೀತ ಧಾರೆಯೆರೆದರು. ಇಲ್ಲಿ ಪಳಗಿದ ಅನೇಕರು ಇಂದು ಗಾಯಕ ಗಾಯಕಿಯರಾಗಿದ್ದು ನಾಡಿನಾದ್ಯಂತ ಸಂಗೀತ ಕಛೇರಿ ನೀಡುತ್ತಿದ್ದಾರೆ. ಅಲ್ಲದೆ 1930ರಲ್ಲಿ ಮೀರಜ್‌ನಲ್ಲಿ ಪಂ. ವಿಷ್ಣುದಿಗಂಬರ ಪಲುಸ್ಕರ್ ಹಾಗೂ ಪಂ.

ಹಂಪಿ ಕನ್ನಡ ವಿವಿಯ ಸಂಗೀತ ಮತ್ತು ನೃತ್ಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿರುವ ವಿದುಷಿ ಜಯದೇವಿ ಜಂಗಮಶೆಟ್ಟಿ ನಾಡಿನ ಹೆಸರಾಂತ ಗಾಯಕಿ. ಸಂಗೀತವನ್ನು ಅಕಡೆಮಿಕ್ ಆಗಿ ಅಧ್ಯಯನ ಮಾಡಿರುವ ಜಯದೇವಿ, ಪದವಿ–ಸ್ನಾತಕೋತ್ತರ ಪದವಿಗಳಲ್ಲಿ ಸಂಗೀತವನ್ನು ಐಚ್ಛಿಕವಾಗಿ ಅಧ್ಯಯನ ಮಾಡಿದವರು. ‘ವಚನ ಗಾಯನ ಪರಂಪರೆ – ಒಂದು ಸಂಗೀತಾತ್ಮಕ ಅಧ್ಯಯನ’ ಎಂಬ ವಿಷಯದ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದವರು. ತಮ್ಮ ಸಂಗೀತ ಸಾಧನೆ ಹಾಗೂ ಸಂಗೀತದ ಕಲಿಕೆಯ ಸಾಧ್ಯತೆಗಳ ಕುರಿತು ‘ಸುಧಾ’ ಜೊತೆ ಅವರು ಮಾತನಾಡಿದ್ದಾರೆ.

■ ಸಂದರ್ಶನ: **ಉಮಾ ಅನಂತ್**